ಗ್ರಾಮೀಣಭಾಗದಲ್ಲಿ ಕೃಷಿಕರ ಮಕ್ಕಳ ಶಿಕ್ಷಣ

15(81); ಶ್ರೀ ಪಾಟೀಲ ಬಿ.ಆರ್. (ಆಳಂದ)

ಅ) ಗ್ರಾಮೀಣ ಭಾಗದಲ್ಲಿ ಕೃಷಿಕರ ಮಕ್ಕಳು ಪಾರಂಪರಿಕ ಶಿಕ್ಷಣ ಪಡೆದು ಕೃಷಿ ಯಿಂದ ದೂರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಮಕ್ಕಳಿಗೆ ಕೃಷಿ ಆಧಾರಿತ ಶಿಕ್ಷಣ ಕೊಡಲು ಮತ್ತು ಹೊಸ ಹೊಸ ತಂತ್ರಜ್ಞಾನ ಕಲಿಸಲು ಸರ್ಕಾರ ಕೃಷಿ ಶಾಲೆ ಪ್ರಾರಂಭ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಇ) ಇದರಿಂದ, ನಿರುದ್ಯೋಗ ಸಮಸ್ಯೆ ನಿವಾರಿಸಿ ಕೃಷಿಯನ್ನು ಗಟ್ಟಿಗೊಳಿಸಲು ಸಾಧ್ಯವಿಲ್ಲವೇ?

ಶ್ರೀ ಕೃಷ್ಣ ಭೈರೇಗೌಡ (ಮಾನ್ಯ ಕೃಷಿ ರಾಜ್ಯ ಸಚಿವರು)

ಅ) ಹೌದು. ಕೃಷಿಯಿಂದ ಕೃಷಿಯೇತರ ಚಟುವಟಿಕೆಗಳ ಕಡೆಗೆ ರಾಜ್ಯದ ಜನಸಂಖ್ಯೆ ವರ್ಗವಾಗುತ್ತಿರುವುದನ್ನು ಗಮನಿಸಲಾಗಿದೆ.

ಆ) ಕೃಷಿಕರ ಮಕ್ಕಳಿಗೆ ಕೃಷಿ ಆಧಾರಿತ ಶಿಕ್ಷಣ ಕೊಡುವ ನಿಟ್ಟಿನಲ್ಲಿ ರಾಜ್ಯದ 4 ಕೃಷಿ ವಿಶ್ವವಿದ್ಯಾಲಯಗಳ ಮೂಲಕ 1785 ಸಂಖ್ಯೆಯಲ್ಲಿ ಕೃಷಿ ಸಂಬಂಧಿತ ಪದವಿಗೆ ಪ್ರತಿ ವರ್ಷ ಪ್ರವೇಶ ನೀಡಲಾಗುತ್ತಿದೆ. ಈ ಸಂಖ್ಯೆಯ ಕೃಷಿ ತಜ್ಞರು ರಾಜ್ಯದ ಅವಶ್ಯಕತೆಯನ್ನು ಪೂರೈಸುತ್ತಿಲ್ಲವೆಂದು ಮನಗಂಡು 2–3 ವರ್ಷದಿಂದ ಕೃಷಿ ಡಿಪ್ಲೊಮೊ ಕೋರ್ಸನ್ನು ಪ್ರಾರಂಭಿಸಲಾಗಿದೆ. ಅದರಡಿಯಲ್ಲಿ ಪ್ರತಿ ವರ್ಷ 435 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿದೆ. ಆದಾಗ್ಯೂ ಸಹ ಇನ್ನೂ ಹೆಚ್ಚಿನ ಕೃಷಿ ತಜ್ಞರನ್ನು ಸೃಜಿಸುವ ಉದ್ದೇಶದಿಂದ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಶಿಕ್ಷಣ ಕೊಡುವ ದೃಷ್ಟಿಯಿಂದ ಈ ವರ್ಷದ ಫೆಬ್ರವರಿಯಿಂದ ವಿವಿಧ 15 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಒಂದು ವರ್ಷದ ಕೃಷಿ ಸಂಬಂಧಿತ ಐ.ಟಿ.ಐ. ಕೋರ್ಸ್‌ನ್ನು

ಆರಂಭಿಸುತ್ತಿದ್ದೇವೆ. ಇದರಡಿಯಲ್ಲಿ ಎಷ್ಟೇ ಸಂಖ್ಯೆಯಲ್ಲಿ ಪ್ರವೇಶಕ್ಕೆ ಬೇಡಿಕೆ ಬಂದರೂ ಸಹ ಅದನ್ನು ಪೂರೈಸಲಾಗುವುದು ಮತ್ತು ರಾಜ್ಯದ ಯಾವುದೇ ಸರ್ಕಾರಿ ಐ.ಟಿ.ಐ. ಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಬೇಡಿಕೆ ಬಂದಲ್ಲಿ ಅಲ್ಲಿಯೂ ಸಹ ಈ ಕೋರ್ಸನ್ನು ಆರಂಭಿಸಲಾಗುವುದು. ಕೃಷಿಯಲ್ಲಿ ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನದ ಅಳವಡಿಕೆ ಕುರಿತು 3 ಮತ್ತು 5 ದಿನಗಳ ಸಂಸ್ಥಾ ತರಬೇತಿಗಳನ್ನು ರಾಜ್ಯದ ವಿವಿಧ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ಏರ್ಪಡಿಸಲಾಗುತ್ತಿದೆ. ಭೂಚೇತನ ಯೋಜನೆಯಡಿ 9727 ಸಂಖ್ಯೆಯ ರೈತ ಮಕ್ಕಳನ್ನು ರೈತ ಅನುವುಗಾರರನ್ನಾಗಿ ತರಬೇತುಗೊಳಿಸಿ ಕೃಷಿ ಇಲಾಖೆಯಲ್ಲಿ ತೊಡಗಿಸಿಕೊಳ್ಳಲಾಗಿದೆ. ಕೃಷಿ ವಿಶ್ವವಿದ್ಯಾಲಯಗಳು ಕೃಷಿ ಪದವೀಧರರು ಸ್ವಯಂ ಉದ್ಯೋಗ ಕೈಗೊಳ್ಳಲು ತರಬೇತಿಯನ್ನು ಸಹ ನೀಡುತ್ತಿದೆ.

ಈ ರೀತಿಯಾಗಿ ಸಾವಿರಾರು ಗ್ರಾಮೀಣ ಕೃಷಿಕರ ಮಕ್ಕಳಿಗೆ ಕೃಷಿ ಶಿಕ್ಷಣ ಒದಗಿಸಲು ಕ್ರಮ ಕೈಗೊಂಡಿದ್ದೇವೆ.

ಇ)

- ತರಬೇತಿ ಮುಖಾಂತರ ಯುವಕರು ಕೃಷಿಯಲ್ಲಿ ನಿಪುಣತೆಯನ್ನು ಪಡೆದು ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗುತ್ತದೆ.
- ಗ್ರಾಮೀಣ ವಿದ್ಯಾರ್ಥಿಗಳು ಕೃಷಿ ಸಂಬಂಧಿತ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಬಹುದಲ್ಲದೆ ತಮ್ಮದೇ ಸ್ವಂತ ಜಮೀನಿನಲ್ಲಿ ವೈಜ್ಞಾನಿಕ ಕೃಷಿಯನ್ನು ಕೈಗೊಳ್ಳಬಹುದಾಗಿದೆ.
- ಹೈಟೆಕ್ ಕೃಷಿ ಯಂತ್ರೋಪಕರಣಗಳ ಅಳವಡಿಕೆ ಮತ್ತು ನಿರ್ವಹಣೆಯ ಉದ್ಯೋಗವನ್ನು ಮಾಡಬಹುದಾಗಿದೆ.

- ಕೊಯ್ಲಿನೋತ್ತರ ತಂತ್ರಜ್ಞಾನದಿಂದ ಕೃಷಿ ಕಿರು ಉದ್ದಿಮೆಯನ್ನು ಕೈಗೊಳ್ಳಬಹುದಾಗಿದೆ.

ಶ್ರೀ ಪಾಟೀಲ್ ಬಿ.ಆರ್. (ಆಳಂದ):– ಮಾನ್ಯ ಅಧ್ಯಕ್ಷರೆ, ಇದು ಎಲ್ಲರಿಗೂ ಗೊತ್ತಿರುವಂತಹ ವಿಷಯ. ಇವತ್ತಿನ ಈ ಶಿಕ್ಷಣ ಪದ್ಧತಿಯಿಂದ ಕಲಿತವರೆಲ್ಲಾ ಅಂದರೆ ಈಗ ಯಾರು ಶಾಲಾ–ಕಾಲೇಜುಗಳಿಗೆ ಹೋಗಿ ಪಾರಂಪರಿಕ ಶಿಕ್ಷಣವನ್ನು ಪಡೆಯುತ್ತಾರೆ, ಅವರು ಶಿಕ್ಷಣ ಪಡೆದ ನಂತರ ಒಂದು ಸಲ ಪಟ್ಟಣ ಸೇರಿದ ಮೇಲೆ ಮತ್ತೆ ಅವರು ಕೃಷಿಗೆ ಬರುತ್ತಿಲ್ಲ. ನನ್ನ ಮೂಲ ಉದ್ದೇಶವೇನೆಂದರೆ, ಗ್ರಾಮೀಣ ಮಟ್ಟದಲ್ಲಿ ಕೃಷಿ ಕಸುಬಿನಲ್ಲಿ ಮಕ್ಕಳಿಗೆ ತರಬೇತಿ ಕೃಷಿಯನ್ನು ಇನ್ನೂ ಬೆಳೆಸಬೇಕು, ಉಳಿಸಬೇಕು ಹಾಗೂ ಇನ್ನೂ ಜೀವಂತವಾಗಿಡಬೇಕು ಎನ್ನುವ ಉದ್ದೇಶದಿಂದ ತಾವು ಏನಾದರೂ ಯೋಜನೆ ಮಾಡಿದ್ದೀರಾ ಎಂದು ಪ್ರಶ್ನೆ ಕೇಳಿದ್ದಕ್ಕೆ ಸ್ಪಷ್ಟವಾದ ಮಾಹಿತಿ ಕೊಟ್ಟಿಲ್ಲ. ತಮ್ಮ ಸರ್ಕಾರದ ಯೋಜನೆ ತಾವು ಹೇಳಿದ್ದೀರಿ. ಡಿಪ್ಲೋಮಾ ಕೋರ್ಸ್ ಮಾಡುತ್ತಿದ್ದೇವೆ, ITI ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ. ಆದರೆ, ಈ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆ ತರಹ ನಮ್ಮ ಹಳ್ಳಿಗಾಡಿನ ಪ್ರದೇಶಗಳಲ್ಲಿ ನೀವು ಹೇಳಿದಂತಹ ಶಾಲೆಗಳನ್ನು ತೆಗೆಯುತ್ತಿದ್ದೀರಾ? ದೂರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಆದರೆ, ನೀವು ವರ್ಗವಾಗುತ್ತಿರುವುದನ್ನು ಗಮನಿಸಲಾಗಿದೆ ಎಂದು ಉತ್ತರ ಹೇಳಿದ್ದೀರಿ. ವರ್ಗ ಎಂದರೆ ನನಗೆ ಅರ್ಥವಾಗುತ್ತಿಲ್ಲ. ವರ್ಗ ಎಂದರೆ ಬೇರೆ ಕಡೆಯವರು ಹೋಗಿ settle ಆಗುತ್ತಾರೆ ಎಂದು ಅರ್ಥ. ಇದು settle ಆಗುತ್ತಿಲ್ಲ. ನಿರುದ್ಯೋಗ ಸಂಖ್ಯೆ ಜಾಸ್ತಿಯಾಗುತ್ತಿದೆ. ಅದೇ ರೀತಿ ತಾವು ಕೃಷಿ ಶಾಲೆ ಆರಂಭ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆ ಎಂದು ಕೇಳಿದಾಗ ಅನೇಕ ಯೋಜನೆಗಳನ್ನು ಹೇಳಿದ್ದೀರಿ. ಹಳ್ಳಿಗಾಡಿನಲ್ಲಿ ನಿರುದ್ಯೋಗ ಸಮಸ್ಯೆ ಬಹಳ ದೊಡ್ಡ ಸಮಸ್ಯೆಯಾಗಿ ಉದ್ಭವವಾಗುತ್ತಿದೆ. ಬಹಳಷ್ಟು ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳು ಹಾಗೂ ಬೇರೆ ಬೇರೆ ತಾಂತ್ರಿಕ ಕೋರ್ಸ್‌ಗಳನ್ನು ತೆರೆಯಲಾಗಿದೆ. ಆದರೆ, ಕೃಷಿಗೆ ಸಂಬಂಧಪಟ್ಟಂತೆ ಗ್ರಾಮೀಣ

ಭಾಗದಲ್ಲಿ ತಾವು ಏನು ಯೋಜನೆ ಹಾಕಿಕೊಂಡು ಮಕ್ಕಳಿಗೆ ಉದ್ಯೋಗ ಕೊಡುತ್ತೀರಿ ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರ ಪ್ರಶ್ನೆಗೆ ಬಹಳ ಸ್ಪಷ್ಟವಾದ ಉತ್ತರವನ್ನು ನಾವು ಕೊಟ್ಟಿದ್ದೇವೆ. ಅದಕ್ಕೂ ಮೇಲ್ಪಟ್ಟು ಅವರು ಕೇಳುತ್ತಿರುವುದು ಕೃಷಿ ಆಧಾರಿತ ತರಬೇತಿ ಎಂದು ಕೇಳಿದ್ದಾರೆ. ರಾಜ್ಯದ ನಾಲ್ಕು ಕೃಷಿ ವಿಶ್ವವಿದ್ಯಾನಿಲಯಗಳ ಮೂಲಕ 1785 ಜನರಿಗೆ ಪದವಿ ಶಿಕ್ಷಣ ನಂತರ ಸ್ನಾತಕೋತ್ತರ ತದನಂತರ ಇನ್ನೂ ಹೆಚ್ಚುವರಿ ಶಿಕ್ಷಣ ಇದೆ. ಸಾಲುವುದಿಲ್ಲ ಎಂದು ಇನ್ನೂ ಹೆಚ್ಚಿನ ಜನಕ್ಕೆ ಕೃಷಿ ಕೊಡಬೇಕು ಎಂದು ಡಿಪ್ಲೊಮಾ ಕಾಲೇಜುಗಳನ್ನು ಆರಂಭ ಮಾಡಿದ್ದೇವೆ. ಡಿಪ್ಲೊಮಾ ಮುಖಾಂತರ 435 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. ಅದೂ ಸಾಲುತ್ತಿಲ್ಲ ಎನ್ನುವುದನ್ನು ಮನಗಂಡು ಹೆಚ್ಚಿನ ಜನಕ್ಕೆ ಕೃಷಿ ಶಿಕ್ಷಣವನ್ನು ನೀಡಬೇಕೆಂದು, ನಾವು ಕೃಷಿ ವಿಶ್ವವಿದ್ಯಾಲಯಗಳನ್ನೇ ಅವಲಂಬಿಸಿಕೊಂಡರೆ ಹೆಚ್ಚಿನ ಜನರಿಗೆ ಅದು ತಲುಪುವುದಕ್ಕೆ ಆಗುವುದಿಲ್ಲವೆಂದು, ಈಗ ಏನು ಸರ್ಕಾರಿ ITI ಗಳಿವೆ ಅವುಗಳ ಜೊತೆಗೆ ಒಡಂಬಡಿಕೆ ಮಾಡಿಕೊಂಡು ITI ಮುಖಾಂತರ ಈಗ ಕೃಷಿ ಶಿಕ್ಷಣವನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಇದು ಕೇವಲ ಒಂದು ವರ್ಷ ಕೊಡುವ ವ್ಯವಸ್ಥೆ. ಈಗ ನಾವು 3–4 ವರ್ಷಗಳು ಶಿಕ್ಷಣ ಕೊಟ್ಟರೆ ಸಮಯ ಜಾಸ್ತಿಯಾಗುತ್ತದೆ ಹಾಗೂ ಅಷ್ಟೊಂದು ಪರಿಣತಿಯ ಅವಶ್ಯಕತೆ ಇಲ್ಲವೆಂದು ಕೇವಲ ಒಂದು ವರ್ಷಕ್ಕೆ ಸೀಮಿತವಾದ ಕೋರ್ಸ್‌ಅನ್ನು ಡಿಸೈನ್ ಮಾಡಿ, ITI ಗಳ ಮುಖಾಂತರವಾಗಿ ಫೆಬ್ರವರಿ ತಿಂಗಳಿನಿಂದ ಸುಮಾರು 15 ITI ಗಳಲ್ಲಿ ಆರಂಭ ಮಾಡುತ್ತಿದ್ದೇವೆ. ಇನ್ನೂ ಹೆಚ್ಚಿನ ಬೇಡಿಕೆ ಬಂದರೆ ಎಷ್ಟು ಕಡೆಗಳಲ್ಲಿ ಸರ್ಕಾರಿ ITI ಗಳು ಇವೆ ಅವುಗಳ ಮುಖಾಂತರವಾಗಿ ರೈತರಿಗೆ ಆಗಬಹುದು, ಕೃಷಿಕರಿಗೆ ಆಗಬಹುದು ಅಥವಾ ಎಸ್.ಎಸ್.ಎಲ್.ಸಿ. ಪಾಸ್ ಆಗಿರುವಂತಹವರಿಗೆ ಎಷ್ಟು ಸಂಖ್ಯೆಯಲ್ಲಿ ಬೇಡಿಕೆ ಬಂದರೂ ಸಹ ITI ಮುಖಾಂತರ ನಾವು ಕೃಷಿ ಶಿಕ್ಷಣವನ್ನು ಕೊಡತಕ್ಕಂತಹ ಕೆಲಸವನ್ನು ಮಾಡುತ್ತೇವೆ. ಒಂದು ವರ್ಷದ ಅವಧಿಯಲ್ಲಿ ಎಲ್ಲಾ ಅಂಶಗಳನ್ನು ಒಳಗೊಂಡಂತೆ ತರಬೇತಿಯನ್ನು ಕೊಡುವಂತಹ ಒಂದು ಕೋರ್ಸ್ ಅನ್ನು

ಡಿಸೈನ್ ಮಾಡಿದ್ದೇವೆ. ಇದು ಕೃಷಿಗೆ ಪೂರಕವಾಗಿ ಮತ್ತು ಕೃಷಿ ವಿಜ್ಞಾನ ಕೇಂದ್ರಗಳ ಜೊತೆಗೂ ಸಹ ಸೇರಿಕೊಂಡು ಈ ಕೋರ್ಸ್‌ಅನ್ನು ಡಿಸೈನ್ ಮಾಡಿರುವುದರಿಂದ ಸಾಕಷ್ಟು field training ಕೂಡ ಇರುತ್ತದೆ, ಸ್ವಲ್ಪ ಮಟ್ಟಿಗೆ ಅದರಲ್ಲಿ theory ಸಹ ಇರುತ್ತದೆ. ಇವೆರಡನ್ನು ಅಳವಡಿಸಿಕೊಂಡು ಎಷ್ಟು ಸಂಖ್ಯೆಯಲ್ಲಿ ಅವಶ್ಯಕತೆ, ಬೇಡಿಕೆ ಬರುತ್ತದೆ ಅದನ್ನು ನೋಡಿಕೊಂಡು ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಸಹ ITI ಮುಖಾಂತರ ಈ ಶಿಕ್ಷಣವನ್ನು ಕೊಡುವಂತಹ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ.

ಶ್ರೀ ಪಾಟೀಲ ಬಿ.ಆರ್.:– ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ತಾವು ಉತ್ತರ ಕೊಟ್ಟಿದ್ದೀರಿ. ಆದರೆ, ನನ್ನ ಕಲ್ಪನೆ ಹಾಗೂ ಚಿಂತನೆ ಬೇರೆ.

ಅಧ್ಯಕ್ಷರು:– ಇಲ್ಲಿ ಕಲ್ಪನೆ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಕಲ್ಪನೆ ಸಾವಿರ ಇರುತ್ತವೆ. ನೀವು ಪ್ರಶ್ನೆ ಏನು ಕೇಳಿರುತ್ತೀರಿ ಅದಕ್ಕೆ ಅವರು ಉತ್ತರ ಕೊಟ್ಟಿರುತ್ತಾರೆ. ಈಗ ವಿಸ್ತಾರವಾಗಿ ಅದಕ್ಕೆ ಮರು ಉತ್ತರವನ್ನೂ ಅವರು ಕೊಟ್ಟಿದ್ದಾರೆ.

ಶ್ರೀ ಪಾಟೀಲ ಬಿ.ಆರ್.:– ಹಾಗಾದರೆ ಈಗ ನನ್ನದನ್ನು ಕೇಳಬಾರದೇ?

ಅಧ್ಯಕ್ಷರು:– ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟಂತೆ ಕೇಳಿ.

ಶ್ರೀ ಪಾಟೀಲ ಬಿ.ಆರ್.:– ಮಹಾರಾಷ್ಟ್ರ ಮಾದರಿಯಲ್ಲಿ ತಾವು ಕೃಷಿ ಶಾಲೆಯನ್ನು ತೆಗೆಯುತ್ತೀರಿ, ITI ತಾಂತ್ರಿಕ ತರಬೇತಿ ಅದು ಕೃಷಿಯಲ್ಲಿ ಕೂಡ ತಾಂತ್ರಿಕತೆ ಬಂದಿದೆ. ಪಾರಂಪರಿಕ ಕೃಷಿಯನ್ನು ಬೆಳೆಸುವುದಕ್ಕೆ ತಾವು ಕೃಷಿ ಶಾಲೆಗಳನ್ನು ಏನಾದರೂ ತರುವುದಕ್ಕೆ ಚಿಂತನೆ ಮಾಡಿದ್ದೀರಾ?

ಅಧ್ಯಕ್ಷರು:– ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ.

ಶ್ರೀ ಕೃಷ್ಣ ಬೈರೇಗೌಡ:– ಇದು ತಾಂತ್ರಿಕ ತರಬೇತಿ ಅಷ್ಟೇ ಅಲ್ಲ. ಇದು ಕೃಷಿ ತರಬೇತಿ. ಅವರು ಕೃಷಿ ಶಾಲೆಗಳನ್ನು ತೆರೆಯಬೇಕು ಎಂದು ಹೇಳುತ್ತಾರೆ. ಕೃಷಿ ಶಾಲೆಗಳ ಬದಲಿಗೆ ನಾವು ITI ಮುಖಾಂತರವಾಗಿ ಹೇಳುತ್ತಿದ್ದೇವೆ. ಉದ್ದೇಶ ನಮ್ಮದೂ ಹಾಗೂ ಅವರದೂ ಒಂದೇ. ಆ ಉದ್ದೇಶವನ್ನು ITI ಗಳ ಮುಖಾಂತರವಾಗಿ ಪೂರೈಸುವಂತಹ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ. ಇದರಲ್ಲಿ ಎಷ್ಟೇ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬಂದರೂ ಸಹ ಅದರ ಮುಖಾಂತರ ನಾವು ಪೂರೈಸುತ್ತೇವೆ.

(ಗೊಂದಲ)

ಅಧ್ಯಕ್ಷರು:– ಯಾವಗಲ್‌ರವರು ಎಂದು ಕರೆದಿದ್ದೇನೆ ಹೇಳಿ.

(ಗೊಂದಲ)

ಶ್ರೀ ಯಾವಗಲ್ ಬಿ.ಆರ್. (ನರಗುಂದ):– ಮಾನ್ಯ ಸಚಿವರು ಇದು ಒಂದು ತರಬೇತಿಯನ್ನು ಕೊಡುವುದಕ್ಕೆ ನಾವು ITI ಮಾಡಿದ್ದೇವೆ ಎಂದು ಹೇಳಿದ್ದಾರೆ. ಬಹುತೇಕ ಸಂಸ್ಥೆಗಳು industry ಆಗಿರಬಹುದು ಅಥವಾ ಕಾಲೇಜುಗಳಾಗಿರಬಹುದು ಇವೆಲ್ಲವೂ ಸಹ ಸರ್ಕಾರಿ ಕೆಲಸ ಅಥವಾ ಬೇರೆ ಸಂಸ್ಥೆಗಳಲ್ಲಿ ಕೆಲಸ ಮಾಡುವುದಕ್ಕೆ ಮಾತ್ರ ಗುರಿಯನ್ನು ಇಟ್ಟುಕೊಂಡು ತರಬೇತಿಯನ್ನು ಕೊಡುತ್ತಾರೆ. ರೈತರ ಮಕ್ಕಳು ಶಿಕ್ಷಣ ಕಲಿತ ನಂತರ ವಾಪಸ್ಸು ಹೋಗಿ ಆ ಕೃಷಿಯಲ್ಲಿಯೇ ಕೆಲಸ ಮಾಡಲಿಕ್ಕೆ ಲಿಂಕ್ ಮಾಡುವುದಕ್ಕೆ ಏನಾದರೂ ತರಬೇತಿಯನ್ನು ತಾವು ಪ್ರಾರಂಭ ಮಾಡುತ್ತೀರಾ?

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಅಧ್ಯಕ್ಷರೆ ನಾವು ಈ ತರಬೇತಿ ಕೊಡುವುದು ಯುವಕರೆಲ್ಲ ವಾಪಸ್ಸು ಹೋಗಿ ಕೃಷಿಯನ್ನು ಮಾಡಲಿ ಎಂದು ಆದರೆ ಅವರು ಹೋಗುತ್ತಿಲ್ಲ. ಮಾನ್ಯ ಸದಸ್ಯರು ನಡೆಯುತ್ತಿರುವ ವಾಸ್ತವಾಂಶದ ಬಗ್ಗೆ ಹೇಳುತ್ತಿದ್ದಾರೆ. ಆದರೆ ನಾವು, ನೀವು ಉದ್ಯೋಗಕ್ಕೆ ಹೋಗಿ ಎಂದು ತರಬೇತಿಯನ್ನು ಕೊಡುವುದಿಲ್ಲ. ನಾವು ತರಬೇತಿ ಕೊಡುತ್ತಿರುವುದು ಕೃಷಿಗೆ ಹೋಗಲಿ ಎಂದು. ಆದರೆ ಅವರು ಉದ್ಯೋಗದ ಕಡೆಗೆ ಹೋಗುತ್ತಿದ್ದಾರೆ. ನಾವು ITI course ಅನ್ನು design ಮಾಡಿ one year

course ಮಾಡಿರುವ ಉದ್ದೇಶವೇನೆಂದರೆ ಹೆಚ್ಚಿನ ಸಂಖ್ಯೆಯಲ್ಲಿ ಯುವಕರಿಗೆ ಅವಕಾಶ ಸಿಕ್ಕಿ ಕೃಷಿಗೆ ವಾಪಸ್ಸು ಹೋಗಲಿ ಎಂದು. ಆದರೆ ಯುವಕರಿಗೆ ಉದ್ಯೋಗದ ಕಡೆ ಆಕರ್ಷಣೆಯಿದೆ. ಅವರಿಗೆ ಸ್ವಾತಂತ್ರ್ಯವಿದೆ.

ಶ್ರೀ ಯಾವಗಲ್ ಬಿ.ಆರ್.:– ಮಾನ್ಯ ಅಧ್ಯಕ್ಷರೆ ಇದು ಬಹಳ ಮುಖ್ಯವಾದ ವಿಷಯ, ಇದರಲ್ಲಿ ತಮಗೂ interest ಇದೆ. ತಾವೇನು ಇವತ್ತು ತರಬೇತಿಯನ್ನು ಕೊಡುತ್ತೀರಿ ಅದಕ್ಕಿಂತ ಜಾಸ್ತಿ ಬೇಡಿಕೆ ಈ ನೌಕರಿಗಳಲ್ಲಿ, ಕೆಲಸದಲ್ಲಿದೆ. ನೀವು ಹೆಚ್ಚೆಚ್ಚು supply ಮಾಡಿದರೆ, ಹೆಚ್ಚೆಚ್ಚು ಜನರಿಗೆ ತರಬೇತಿ ಕೊಟ್ಟರೆ ಕೃಷಿ ಕಡೆ ಹೋಗುತ್ತಾರೆ. ತಾವು ಆ ಕಡೆ ಹೆಚ್ಚಿನ ಗಮನಹರಿಸಿ. ಇದುವರೆಗೆ ಯಾರೂ ಕೂಡ ಹೋಗಿಲ್ಲ, ಬಹಳಷ್ಟು ಜನ ಕೆಲಸದ ಕಡೆ ಹೋಗಿದ್ದಾರೆಂದು ಮಾನ್ಯ ಸಚಿವರೂ ಕೂಡ ಒಪ್ಪಿಕೊಂಡಿದ್ದಾರೆ. ದಯವಿಟ್ಟು ಇನ್ನಾದರೂ ಬದಲಾವಣೆ ಮಾಡಲು ಪ್ರಯತ್ನಪಡಿ.

ಶ್ರೀ ಕೃಷ್ಣ ಬೈರೇಗೌಡ:– ಇದನ್ನು ನಾವು ಮನಗಂಡು University ಮುಖಾಂತರ ಮಾಡಿದರೆ ಸಂಖ್ಯೆಯನ್ನು ಜಾಸ್ತಿ ಮಾಡುವುದಕ್ಕಾಗುವುದಿಲ್ಲವೆಂದು, ITI ಮುಖಾಂತರ ಮಾಡಿದರೆ ಸಂಖ್ಯೆಯನ್ನು ಬಹಳ ತ್ವರಿತವಾಗಿ ವೇಗವಾಗಿ ಹೆಚ್ಚು ಮಾಡಬಹುದೆಂಬ ಉದ್ದೇಶದಿಂದ ಸಾವಿರಾರು ಮಕ್ಕಳಿಗೆ ತರಬೇತಿಯನ್ನು ಕೊಡಬಹುದೆಂಬ ದೃಷ್ಟಿಯಿಂದ ITI ಮುಖಾಂತರ ಮಾಡುತ್ತಿದ್ದೇವೆ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೆ, ಕೃಷಿ ನೀತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳಿಗೆ ಪ್ರೋತ್ಸಾಹ ಕೊಡಬೇಕೆಂಬ ಚಿಂತನೆ ಹಿಂದಿನ ದಿವಸಗಳಲ್ಲಿತ್ತು. ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳಿಗೆ ವಿಶೇಷವಾದ ಮೀಸಲಾತಿ ಮತ್ತು ಪ್ರೋತ್ಸಾಹ ನೀಡುವ ಮಾರ್ಕ್ಸ್ ಕೊಡಬೇಕೆಂದು ಇತ್ತು. ಗ್ರಾಮೀಣ ಪ್ರದೇಶದ ಕೃಷಿ ಆಧಾರಿತ Institution ಗಳು ಪಟ್ಟಣಗಳಲ್ಲಿವೆ. ಇದೊಂದು ನೀತಿ ಪ್ರಶ್ನೆಯಾಗಿದೆ. ಈಗಿರುವ ಕೃಷಿ ನೀತಿಯಡಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿರುವ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವಲ್ಲಿ ಅವರಿಗೆ

ಪ್ರೋತ್ಸಾಹವನ್ನು ಕೊಡುವುದಕ್ಕೋಸ್ಕರ ಈ ಮಕ್ಕಳಿಗೆ admission ನಲ್ಲಿ marks ಕೊಡುತ್ತೀರಾ?

ಶ್ರೀ ಕೃಷ್ಣ ಬೈರೇಗೌಡ:– ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಗ್ರಾಮೀಣ ಪ್ರದೇಶದಲ್ಲಿರುವ ಕೃಷಿಕರ ಮಕ್ಕಳಿಗೆ ಪ್ರವೇಶಾತಿಯಲ್ಲಿ 23.8% ಮೀಸಲಾತಿಯನ್ನು ಇಟ್ಟಿದ್ದೇವೆ.

ಶ್ರೀ ಕೆ. ಶಿವಮೂರ್ತಿ:– ನಾನು ಕೇಳುತ್ತಿರುವುದು ಮೀಸಲಾತಿಯಲ್ಲ; ಮಕ್ಕಳಿಗೆ ಪ್ರೋತ್ಸಾಹ ನೀಡುವ ಬಗ್ಗೆ ಕೇಳುತ್ತಿದ್ದೇನೆ.

ಶ್ರೀ ಕೃಷ್ಣ ಬೈರೇಗೌಡ:– ಇದು ಕೂಡ ಪ್ರೋತ್ಸಾಹವೇ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ವಿಶೇಷವಾಗಿ ಪ್ರತ್ಯೇಕ ಅಂಕವನ್ನು ಇಟ್ಟು ಅದಕ್ಕೆ ಪರೀಕ್ಷೆಯನ್ನು ಸಹ ಮಾಡುತ್ತೇವೆ. ಇದರಲ್ಲಿ ಹಳ್ಳಿ ಮಕ್ಕಳು ಮಾತ್ರ eligible ಇರುತ್ತಾರೆ. ಈಗಾಗಲೇ ಹಳ್ಳಿ ಮಕ್ಕಳಿಗೆ ಎಂದರೆ ಕೃಷಿ ಮಕ್ಕಳಿಗೆ ವಿಶೇಷವಾದ ಪ್ರೋತ್ಸಾಹವನ್ನು 23.8% ಪ್ರವೇಶಾತಿಯಲ್ಲಿ ಇಟ್ಟುಕೊಂಡಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್:– ಕೃಷಿ ಕಾಲೇಜನ್ನು ತೆರೆಯುವ ಬಗ್ಗೆ ಹೊಸದಾಗಿ ಚಿಂತನೆ ಮಾಡಿ.

ಬೆಂಗಳೂರು–ದೊಡ್ಡಬಳ್ಳಾಪುರ–ಹಿಂದೂಪುರ ಹೆದ್ದಾರಿ

19(96); ಶ್ರೀ ವಿಶ್ವನಾಥ ಎಸ್.ಆರ್. (ಯಲಹಂಕ)

ಅ) ಬೆಂಗಳೂರಿನಿಂದ ಯಲಹಂಕ ಮಾರ್ಗವಾಗಿ ದೊಡ್ಡಬಳ್ಳಾಪುರ–ಹಿಂದೂಮರ ಮಾರ್ಗದ ರಾಜ್ಯದ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಂಜೂರು ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಸದರಿ ರಾಜ್ಯ ಹೆದ್ದಾರಿಯನ್ನು ಹಸ್ತಾಂತರಿಸಲಾಗಿದೆಯೇ; ಈ ರಸ್ತೆಯನ್ನು ಅಭಿವೃದ್ಧಿಪಡಿಸುವ ವಿಚಾರ ಯಾವ ಹಂತದಲ್ಲಿದೆ;

ಇ) ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು;